ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಅಭಿಯಂತರವರ ಕಛೇರಿ, ರಾಜರಾಜೇಶ್ವರಿನಗರ ವಲಯ
18ನೇ ಕ್ರಾಸ್, ಐಡಿಯಲ್ ಹೋಮ್ಸ್, ರಾಜರಾಜೇಶ್ವರಿನಗರ, ಬೆಂಗಳೂರು- 98

ಸಂಖ್ಯೆ:ಮು.ಅ/ರಾ.ರಾ.ನ.ವ/ಪಿಆರ್/ 18 /2021-22 ದಿನಾಂಕ:24.01.2022

ಪರಿವೀಕ್ಷಣಾ ವರದಿ

ವಿಷಯ:- **Construction of Shops at HMT Layout and J.P Park Double Road in ward no.17** ಕಾಮಗಾರಿಯ ಪರಿವೀಕ್ಷಣಾ ವರದಿ ನೀಡುವ ಬಗ್ಗೆ.

* * * * *

ಹಾಜರಿದ್ದ ಅಧಿಕಾರಿಗಳು:

1. ಕಾರ್ಯಪಾಲಕ ಅಭಿಯಂತರರು ರಾ.ರಾ.ನಗರ ವಿಭಾಗ
2. ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಶವಂತಪುರ ಉಪವಿಭಾಗ

ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ ವಾರ್ಡ್ ನಂ.17, ಜಾಲಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿ 2018-19ನೇ ಸಾಲಿನ ಕಾಮಗಾರಿಯು ಲೆಕ್ಕಶೀರ್ಷಿಕೆ ಪಿ-3853 ರಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಯಾದ **"Construction of Shops at HMT Layout and J.P Park Double Road in ward no.17" (017-21-000015)** ರಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ರೂ.71.00 ಲಕ್ಷಗಳಿಗೆ 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯ ದರದಂತೆ ಅಂದಾಜು ಪಟ್ಟಿ ಮಂಜೂರಾಗಿದ್ದು, ಅದರಂತೆ ಟೆಂಡರ್ ಕರೆದು ಸದರಿ ಕಾಮಗಾರಿಯ ಕಾರ್ಯಾದೇಶ ಸಂಖ್ಯೆ: EE/RRND/WO.No./0142/2021-22 Dt.16.12.2021 ರಂದು ಗುತ್ತಿಗೆದಾರರಾದ ಮೆ॥ ಎಂ.ಆರ್ ಇನ್‌ಫ್ರಾ (ಸಿ.ಆರ್ ಮಂಗಳ) ರವರಿಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ.

ಮುಂದುವರೆದು, ಸದರಿ ಕಾಮಗಾರಿಯ ಸುಮಾರು ರೂ.64.03 ಲಕ್ಷಗಳ ವೆಚ್ಚದಲ್ಲಿ ಕಟ್ಟಡ ನಿರ್ಮಾಣ ಮಾಡಲು ಉದ್ದೇಶಿಸಿದ್ದು, ಟೆಂಡರ್ ಮೂಲಕ ಮೆ॥ ಎಂ.ಆರ್ ಇನ್‌ಫ್ರಾ ಇವರಿಗೆ ಕಟ್ಟಡ ಕಾಮಗಾರಿಯು ದೊರೆತ್ತಿರುತ್ತದೆ. ಆದರೆ ಇಲ್ಲಿನ ಬಡತನ ರೇಖೆಗಿಂತಲೂ ಕೆಳಗಿರುವಂತಹ ಸ್ಥಳೀಯ ನಿವಾಸಿಗಳು ಮಾನ್ಯ ಶಾಸಕರು, ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ರವರಿಗೆ ಮನವಿ ಸಲ್ಲಿಸಿ ಬೀದಿ ಬದ ವ್ಯಾಪರ ಮಾಡಿ ಹಾಗೂ ಜೀವನೋಪಾಯ ನಡೆಸಲು ಅನುಕೂಲವಾಗುವಂತೆ ಸುಮಾರು 30 ಅಂಗಡಿಗಳನ್ನು ನಿರ್ಮಾಣ ಮಾಡಿಸಿ ಕೊಡುವಂತೆ ಕೋರಿರುತ್ತಾರೆ. ಅದುದರಿಂದ ಸ್ಥಳೀಯ ನಿವಾಸಿಗಳ ಕೋರಿಕೆಯಂತೆ ಅಂಗಡಿ ಮಳಿಗೆಗಳನ್ನು ನಿರ್ಮಾಣ ಮಾಡಲು ಕೂಡಲೇ ಕ್ರಮ ವಹಿಸುವಂತೆ ಮಾನ್ಯ ಶಾಸಕರು, ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ಹಾಗೂ ಮಾನ್ಯ ಸಚಿವರು, ತೋಟಗಾರಿಕೆ ಮತ್ತು ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು ರವರು ಕಂಡಿಕೆ(1)ರ ಉಲ್ಲೇಖ(1)ರ ಪತ್ರದಲ್ಲಿ ಸೂಚಿಸಿರುತ್ತಾರೆ.

ಮುಂದುವರೆದಂತೆ, ಮಾನ್ಯ ತೋಟಗಾರಿಕೆ, ಯೋಜನೆ ಮತ್ತು ಸಾಂಖ್ಯಿಕ ಸಚಿವರು ಹಾಗೂ ಶಾಸಕರು, ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ರವರ ನಿರ್ದೇಶನದಂತೆ ಮು.ಅ(ರಾ.ರಾ.ನಗರ) ಮತ್ತು ಕಾ.ಪಾ.ಅ(ರಾ.ರಾ.ನಗರ) ರವರು ಕಾಮಗಾರಿ ಸ್ಥಳವನ್ನು ಪರಿಶೀಲಿಸಿ ಸದರಿ ಕಾಮಗಾರಿಯ ಮೂಲ ಅಂದಾಜುಪಟ್ಟಿಯಲ್ಲಿ ಅಂಗಡಿ ಮಳಿಗೆಗಳ ಸಮುಚ್ಚಯ ಕಟ್ಟಡ (Complex) ಬದಲಿಗೆ 30 ಅಂಗಡಿ ಸಾಲು ಅಂಗಡಿ ಮಳಿಗೆಗಳನ್ನು ನಿರ್ಮಿಸಲು ಅವಶ್ಯವಿರುವ ಅಂಶಗಳನ್ನು ಅಳವಡಿಸಿಕೊಂಡು ಕೆಲವು ಮಾರ್ಪಾಡುಗಳೊಂದಿಗೆ ಮಾರ್ಪಾಡು ಅಂದಾಜು ಪಟ್ಟಿಯನ್ನು ತಯಾರಿಸಲು ಸೂಚಿಸಿರುವ ಮೇರೆಗೆ ಅದರಂತೆ ಸ್ಥಳಕ್ಕನುಗುಣವಾಗಿ ಹಾಗೂ ತಾಂತ್ರಿಕವಾಗಿ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ನಿರ್ವಹಿಸಬೇಕಿದ್ದು, ಈ ಸಂದರ್ಭ ಅನುಮೋದಿತ ಅಂದಾಜು ಪಟ್ಟಿಯಲ್ಲಿರುವ ಕೆಲವು ಅಂಶಗಳಲ್ಲಿನ ಪ್ರಮಾಣವು

ಮು.ತಿ.ನೋ....

Scanned with CamScanner

ಹೆಚ್ಚುವರಿಯಾಗಿರುತ್ತದೆ. ಅಲ್ಲದೆ ಈಗಾಗಲೇ ಅಳವಡಿಸಿರುವ ಕೆಲವೊಂದು ಅಂಶಗಳಲ್ಲಿನ ಪರಿಮಾಣ ಉಳಿತಾಯವಾಗುತ್ತದೆ. ಮೂಲ ಅಂದಾಜಿನಲ್ಲಿ ಅಳವಡಿಸಿಕೊಂಡಿದ್ದ ಅಂಶಗಳ ಜೊತೆಗೆ ಕೆಲವು ಮಾರ್ಪಾಡುಗಳನ್ನು ಮಾಡಿ ಪಾಲಿಕೆಯ ಬೊಕ್ಕಸಕ್ಕೆ ಯಾವುದೇ ಆರ್ಥಿಕ ಹೊರೆಯಾಗದಂತೆ ಸದರಿ ಮಾರ್ಪಡಿತ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿಕೊಂಡು ಅನುಮೋದನೆ ಪಡೆದುಕೊಳ್ಳಲು ಕಾರ್ಯಪಾಲಕ ಅಭಿಯಂತರರು (ರಾ.ರಾ.ನಗರ) ರವರಿಗೆ ಪರಿವೀಕ್ಷಣೆ ಸಮಯದಲ್ಲಿ ಸೂಚಿಸಲಾಯಿತು.

ಮುಖ್ಯ ಅಭಿಯಂತರರು
ರಾಜರಾಜೇಶ್ವರಿನಗರ ವಲಯ

ರವರಿಗೆ,
ಕಾರ್ಯಪಾಲಕ ಅಭಿಯಂತರರು
ರಾ.ರಾ.ನಗರ ವಿಭಾಗ

Scanned with CamScanner